


ಗುಂಡನ ಅಪ್ಪ: ನನ್ನ ಮಿತ್ರ ಪುಂಡಲೀಕನ ಮಗಳನ್ನು ನೋಡು ತರಗತಿಯಲ್ಲೇ ಪ್ರಥಮ ಸ್ಥಾನ ಗಿಟ್ಟಿಸಿದ್ದಾಳೆ. ನೀನು ಇದ್ದೀಯಾ.

ಗುಂಡ: ಇನ್ನೆಷ್ಟು ನೋಡಲಿ ಅಪ್ಪ? ಅವಳನ್ನು ನೋಡಿ ನೋಡಿಯೇ ತಾನೆ ನಾನು ಅನುತ್ತೀರ್ಣನಾಗಿರೋದು.

★★★

ಚಳಿಗಾಲದಲ್ಲಿ ಸ್ನಾನ ಮಾಡುವವರೆಲ್ಲರೂ ಸ್ನಾನಕ್ಕೆ ಮೊದಲು ಸೈಲೆಂಟ್ ಮೋಡ್‌ನಲ್ಲಿರುತ್ತಾರೆ. ಮೈಮೇಲೆ ಬಿಸಿ ನೀರು ಬಿದ್ದ ಕೂಡಲೇ ಅವರ ಸ್ಪೀಕರ್ ಆನ್ ಆಗುತ್ತದೆ. ಸ್ನಾನ ಮುಗಿದ ಮೇಲೆ ವೈಬ್ರೇಷನ್ ಮೋಡ್‌ಗೆ ಹೋಗುತ್ತಾರೆ.

★★★

ಗುಂಡ: ದೇವಾಲಯಗಳಲ್ಲಿ ಪುರುಷರೇ ಏಕೆ ಪೂಜಾರಿಗಳಾಗುತ್ತಾರೆ?

ಗುರೂಜಿ: ಜನರಿಗೆ ದೇವರ ಮೇಲೆ ಧ್ಯಾನವಿರಲಿ ಎಂದು.

ಗುಂಡ: ಆದರೆ, ಇತ್ತೀಚೆಗೆ ಕೆಲವು ಮಂದಿರಗಳಲ್ಲಿ ಮಹಿಳೆಯರನ್ನೂ ಪೂಜಾರಿಗಳಾಗಿ ನೇಮಿಸಿದ್ದಾರೆ ಎಂಬ ಸುದ್ದಿಯಿದೆಯಲ್ಲಾ?

ಗುರೂಜಿ: ಅದು ಭಕ್ತಾಧಿಗಳ ಧ್ಯಾನವನ್ನು ಪರೀಕ್ಷಿಸಲು.

ನಿರುದ್ಯೋಗಿ ಬಾಯ್ ಫ್ರೆಂಡ್: ದಿನಾ ಒಂದೇ ಉಡುಪು ಧರಿಸಿ ಕೆಲಸಕ್ಕೆ ಹೋಗುತ್ತೀಯಲ್ಲ ನಾಚಿಕೆ ಅನ್ನಿಸುವುದಿಲ್ಲವೆ ನಿನಗೆ?

ಹುಡುಗಿ: ಮೊದಲು ನೀನು ಒಂದು ಕೆಲಸ ಹುಡುಕು ಆಗ ತಿಳಿಯುತ್ತದೆ. ಇದು ನಮ್ಮ ಆಫೀಸಿನ ಯೂನಿಫಾರಂ ಕಣಯ್ಯಾ?

★★★

ವರ ಪಕ್ಷದವರು– ವಧು ಪಕ್ಷದವರಿಗೆ ಹೇಳಿದರು. ನಮಗೆ ಹುಡುಗಿ ಇಷ್ಟವಾಗಿದ್ದಾಳೆ. ಮದುವೆಯನ್ನು ಯಾವಾಗ ಇಟ್ಟು ಕೊಳ್ಳೋಣ. ಸದ್ಯಕ್ಕೆ ನಾವು ಮದುವೆಯನ್ನು ಮಾಡುವಂತಿಲ್ಲ. ಏಕೆಂದರೆ ನಮ್ಮ ಹುಡುಗಿ ಇನ್ನೂ ಓದುತ್ತಿದ್ದಾಳೆ ಎಂದರು ವಧುವಿನ ತಂದೆ– ತಾಯಿ.

ಓದಲಿ ಬಿಡಿ, ಮದುವೆ ಮಾಡಿದರೆ ಅವಳ ಪುಸ್ತಕಗಳನ್ನು ಹರಿದು ಹಾಕುವಷ್ಟು ಚಿಕ್ಕ ಮಗುವೇನಲ್ಲ ನಾನು ಎಂದ ವರ.

★★★

ವೈದ್ಯರ ಬಳಿ ಹೋದ ಗುಂಡಪ್ಪನ ಹೆಂಡತಿ ಲಲಿತಾ ನನ್ನ ಯಜಮಾನರಿಗೆ ಮರೆಗುಳಿತನ ಜಾಸ್ತಿ ಆಗಿದೆ. ಅದಕ್ಕೇನಾದರೂ ಚಿಕಿತ್ಸೆ ಇದೆಯಾ ಎಂದು ಕೇಳಿದಳು.

ವೈದ್ಯ: ನಿಮ್ಮ ಯಜಮಾನರಿಗೆ ಮರೆಗುಳಿತನ ಇದೆ ಎಂದು ಹೇಗೆ ಗುರ್ತಿಸಿದಿರಿ?

ಲಲಿತಾ: ಮೊನ್ನೆ ನಮ್ಮ ಮ್ಯಾರೇಜ್ ಡೇ ನೆನಪಿಸಿದೆ. ನನ್ನ ಮದುವೆ ದಿನ ನಿನ್ನ ಮದುವೆ ದಿನ ಒಂದೇ ದಿನ ಹೇಗೆ ಬಂತು? ಅಂತ ಹೇಳಿ ಆಶ್ಚರ್ಯಪಟ್ಟರೆಂದು ದುಃಖದಿಂದ ಹೇಳಿದಳು.

**(ಸಂಗ್ರಹ) ಕುಬೇರಪ್ಪ ಎಂ. ವಿಭೂತಿ, ಹರಿಹರ**


